Akashvani : Bangalore
National Bulletins In Kannada
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

27.09.2025 : 7.35AM

**********

ಮುಖ್ಯಾಂಶಗಳು :

1. ಪ್ರಧಾನಿ ನರೇಂದ್ರ ಮೋದಿ ಇಂದು ಒಡಿಶಾಗೆ ಭೇಟಿ; ಜಾರ್ಸುಗುಡದಲ್ಲಿ ೬೦ ಸಾವಿರ ಕೋಟಿ ರೂ. ಅಧಿಕ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ
2. ಪ್ರಕ್ಷುಬ್ಧ ಜಗತ್ತಿಗೆ ಶಾಂತಿ, ರಾಜತಾಂತ್ರಿಕತೆಯ ಸಂದೇಶವನ್ನು ಬ್ರಿಕ್ಸ್ ಬಲಪಡಿಸಬೇಕು - ಸಚಿವ ಡಾ. ಜೈಶಂಕರ್ ಪ್ರತಿಪಾದನೆ
3. ಏಷ್ಯಾಕಪ್ ಕ್ರಿಕೆಟ್ : ಸೂಪರ್ ೪ ಹಂತದಲ್ಲಿ ಶ್ರೀಲಂಕಾ ವಿರುದ್ಧ ಭಾರತಕ್ಕೆ ಸೂಪರ್ ಓವರ್ ಗೆಲುವು, ಅಜೇಯದೊಂದಿಗೆ ಫೈನಲ್ ಪ್ರವೇಶ
4. ೧೨ನೇ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್ ಗೆ ದೆಹಲಿಯ ಜವಾಹರ್ ಲಾಲ್ ನೆಹರೂ ಕ್ರೀಡಾಂಗಣದಲ್ಲಿ ಇಂದು ವಿಧ್ಯುಕ್ತ ಚಾಲನೆ

************

ಪ್ರಧಾನಿ ನರೇಂದ್ರ ಮೋದಿ ಇಂದು ಒಡಿಶಾಗೆ ಒಂದು ದಿನದ ಭೇಟಿ ನೀಡಲಿದ್ದಾರೆ. ಈ ವೇಳೆ ಅವರು, ಜಾರ್ಸುಗುಡದಿಂದ ಅರವತ್ತು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಬಹು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ, ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಈ ಯೋಜನೆಗಳು ದೂರಸಂಪರ್ಕ, ರೈಲ್ವೆ, ಉನ್ನತ ಶಿಕ್ಷಣ, ಆರೋಗ್ಯ ರಕ್ಷಣೆ, ಕೌಶಲ್ಯ ಅಭಿವೃದ್ಧಿ, ಗ್ರಾಮೀಣ ವಸತಿ ಕ್ಷೇತ್ರಗಳು ಸೇರಿದಂತೆ ವಿವಿಧ ಕ್ಷೇತ್ರಗಳನ್ನು ಒಳಗೊಂಡಿವೆ. ಈ ಸಂದರ್ಭದಲ್ಲಿ ಪ್ರಧಾನಿ, ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಟೆಲಿಕಾಂ ಸಂಪರ್ಕ ಕ್ಷೇತ್ರದಲ್ಲಿ, ಸ್ವದೇಶಿ ತಂತ್ರಜ್ಞಾನದೊಂದಿಗೆ ಸುಮಾರು ೩೭ ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ೯೭ ಸಾವಿರದ ೫೦೦ ಕ್ಕೂ ಹೆಚ್ಚು ಮೊಬೈಲ್ ೪ ಟವರ್‌ಗಳನ್ನು ಪ್ರಧಾನಿ ಉದ್ಘಾಟಿಸಲಿದ್ದಾರೆ.. ಸುಮಾರು ೨೬ ಸಾವಿರದ೭೦೦ ಹಳ್ಳಿಗಳನ್ನು ಸಂಪರ್ಕಿಸುತ್ತದೆ.ಸಂಪರ್ಕ ಮತ್ತು ಪ್ರಾದೇಶಿಕ ಬೆಳವಣಿಗೆಯನ್ನು ಹೆಚ್ಚಿಸುವ ಪ್ರಮುಖ ರೈಲ್ವೆ ಯೋಜನೆಗಳಿಗೆ ಪ್ರಧಾನಿ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಇವುಗಳಲ್ಲಿ ಸಂಬಲ್ಪುರ್-ಸರ್ಲಾದಲ್ಲಿ ರೈಲು ಮೇಲ್ಸೇತುವೆಗೆ ಅಡಿಪಾಯ ಹಾಕುವುದು ಮತ್ತು ಕೊರಾಪುಟ್-ಬೈಗುಡ ಮಾರ್ಗ ಮತ್ತು ಮನಾಬರ್-ಕೊರಾಪುಟ್-

ಗೋರಾಪುರ್ ಮಾರ್ಗದ ದ್ವಿಗುಣಗೊಳಿಸುವಿಕೆ ಸೇರಿವೆ.ಇದೇ ವೇಳೆ ಅವರು, ಗುಜರಾತ್‌ನ ಸೂರತ್‌ನಲ್ಲಿ, ಒಡಿಶಾದ ಬೆರ್ಹಾಂಪುರ ಮತ್ತು ಉಧ್ನಾ ನಡುವಿನ ಅಮೃತ್ ಭಾರತ್ ಎಕ್ಸ್‌ಪ್ರೆಸ್ ಗೆ ಹಸಿರು ನಿಶಾನೆ ತೋರಲಿದ್ದಾರೆ. ಪ್ರಧಾನಮಂತ್ರಿಗಳು ತಿರುಪತಿ, ಪಾಲಕ್ಕಾಡ್, ಭಿಲಾಯಿ, ಜಮ್ಮು, ಧಾರವಾಡ, ಜೋಧ್‌ಪುರ್, ಪಾಟ್ನಾ ಮತ್ತು ಇಂದೋರ್‌ನಲ್ಲಿರುವ ಎಂಟು ಐಐಟಿ ವಿಸ್ತರಣೆಗೆ ಅಡಿಪಾಯ ಹಾಕಲಿದ್ದಾರೆ. ಬಹುಶಿಸ್ತೀಯ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣದಲ್ಲಿ ಸಂಶೋಧನಾ ಸುಧಾರಣೆ ಯೋಜನೆಯನ್ನು ಪ್ರಧಾನಿ ಉದ್ಘಾಟಿಸಲಿದ್ದಾರೆ. ಸಂಬಲ್ಪುರ ಮತ್ತು ಬೆರ್ಹಾಂಪುರದಲ್ಲಿ ವಿಶ್ವ ಕೌಶಲ್ಯ ಕೇಂದ್ರಗಳನ್ನು ಸ್ಥಾಪಿಸುವ ಒಡಿಶಾ ಕೌಶಲ್ಯ ಅಭಿವೃದ್ಧಿ ಯೋಜನೆಯ ಎರಡನೇ ಹಂತವನ್ನು ಅವರು ಉದ್ಘಾಟಿಸಲಿದ್ದಾರೆ. ಬೆರ್ಹಾಂಪುರದಲ್ಲಿರುವ ವೈದ್ಯಕೀಯ ಕಾಲೇಜು ಮತ್ತು ಸಂಬಲ್ಪುರದಲ್ಲಿರುವ ವಿಮ್ಸಾರ್ ಅನ್ನು ವಿಶ್ವ ದರ್ಜೆಯ ಸೂಪರ್-ಸ್ಪೆಷಾಲಿಟಿ ಆಸ್ಪತ್ರೆಗಳಾಗಿ ಮೇಲ್ದರ್ಜೆಗೇರಿಸಲು ಅಡಿಪಾಯ ಹಾಕಲಿದ್ದಾರೆ. ಇದರೊಂದಿಗೆ, ಅಂತ್ಯೋದಯ ಗೃಹ ಯೋಜನೆಯಡಿ, ೫೦ ಸಾವಿರ ಫಲಾನುಭವಿಗಳಿಗೆ ಮಂಜೂರಾತಿ ಆದೇಶಗಳನ್ನು ಪ್ರಧಾನಿ ವಿತರಿಸಲಿದ್ದಾರೆ.

************

ಬಹುಪಕ್ಷೀಯತೆ ಒತ್ತಡದಲ್ಲಿರುವಾಗ ಬ್ರಿಕ್ಸ್ ತರ್ಕಬದ್ಧ ಮತ್ತು ರಚನಾತ್ಮಕ ಬದಲಾವಣೆಯ ಬಲವಾದ ಧ್ವನಿಯಾಗಿ ದೃಢವಾಗಿ ನಿಂತಿದೆ ಎಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಪ್ರತಿಪಾದಿಸಿದ್ದಾರೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ೮೦ನೇ ಅಧಿವೇಶನದ ನೇಪಥ್ಯದಲ್ಲಿ ನ್ಯೂಯಾರ್ಕ್ ನಲ್ಲಿ ಬ್ರಿಕ್ಸ್ ವಿದೇಶಾಂಗ ಸಚಿವರ ಸಭೆಯನ್ನು ಆಯೋಜಿಸುವ ಸಂದರ್ಭದಲ್ಲಿ ಡಾ. ಜೈಶಂಕರ್ ಈ ಹೇಳಿಕೆ ನೀಡಿದ್ದಾರೆ. ಪ್ರಕ್ಷುಬ್ಧ ಜಗತ್ತಿನಲ್ಲಿ, ಬ್ರಿಕ್ಸ್ ಶಾಂತಿ ನಿರ್ಮಾಣ, ಸಂವಾದ, ರಾಜತಾಂತ್ರಿಕತೆ ಮತ್ತು ಅಂತಾರಾಷ್ಟ್ರೀಯ ಕಾನೂನಿನ ಅನುಸರಣೆಯ ಸಂದೇಶವನ್ನು ಬಲಪಡಿಸಬೇಕಿದೆ ಎಂದು ಸಚಿವರು ಒತ್ತಾಯಿಸಿದ್ದಾರೆ. ವಿಶ್ವಸಂಸ್ಥೆಯ ಪ್ರಮುಖ ಅಂಗಗಳ, ವಿಶೇಷವಾಗಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಮಗ್ರ ಸುಧಾರಣೆಗಾಗಿ ಬ್ರಿಕ್ಸ್ ತನ್ನ ಸಾಮೂಹಿಕ ಕರೆಯನ್ನು ಹೆಚ್ಚಿಸಬೇಕು ಎಂದಿದ್ದಾರೆ. ಇದಲ್ಲದೆ, ವ್ಯಾಪಾರದ ಹರಿವಿನ ಮೇಲೆ ಹೆಚ್ಚುತ್ತಿರುವ ರಕ್ಷಣಾತ್ಮಕತೆ, ಸುಂಕದ ಚಂಚಲತೆ ಮತ್ತು ಸುಂಕರಹಿತ ಅಡೆತಡೆಗಳ ಪರಿಣಾಮವನ್ನು ಒತ್ತಿ ಹೇಳಿದ ಸಚಿವರು, ಬ್ರಿಕ್ಸ್ ಬಹುಪಕ್ಷೀಯ ವ್ಯಾಪಾರ ವ್ಯವಸ್ಥೆಯನ್ನು ರಕ್ಷಿಸಬೇಕು ಎಂದು ಪ್ರತಿಪಾದಿಸಿದ್ದಾರೆ. ತಂತ್ರಜ್ಞಾನ ಮತ್ತು ನಾವೀನ್ಯತೆ ಬ್ರಿಕ್ಸ್ ಸಹಕಾರದ ಮುಂದಿನ ಹಂತವನ್ನು ವ್ಯಾಖ್ಯಾನಿಸುತ್ತದೆ. ಭಾರತದ ಅಧ್ಯಕ್ಷತೆಯು ಆಹಾರ ಮತ್ತು ಇಂಧನ

ಭದ್ರತೆ, ಹವಾಮಾನ ಬದಲಾವಣೆ ಮತ್ತು ಡಿಜಿಟಲ್ ರೂಪಾಂತರ, ಸ್ಟಾರ್ಟ್‌ಅಪ್‌ಗಳು, ನಾವೀನ್ಯತೆ ಮತ್ತು ಬಲವರ್ಧಿತ ಅಭಿವೃದ್ಧಿ ಪಾಲುದಾರಿಕೆಗಳ ಮೂಲಕ ಸುಸ್ಥಿರ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುತ್ತದೆ ಎಂದು ಅವರು ಹೇಳಿದರು.

************

ಮಹತ್ವದ ಬೆಳವಣಿಗೆಯೊಂದರಲ್ಲಿ, ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ, ಅಂಡಮಾನ್ ಜಲಾನಯನ ಪ್ರದೇಶದಲ್ಲಿ ನೈಸರ್ಗಿಕ ಅನಿಲ ಪತ್ತೆಯಾಗಿದೆ ಎಂದು ಘೋಷಿಸಿದ್ದಾರೆ. ನಿನ್ನೆ ರಾತ್ರಿ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಅಂಡಮಾನ್ ಸಮುದ್ರದಲ್ಲಿ ಇಂಧನ ಅವಕಾಶಗಳ ಸಾಗರ ತೆರೆದುಕೊಂಡಿದೆ ಎಂದು ಸಚಿವರು ತಿಳಿಸಿದ್ದಾರೆ. ಈ ಕುರಿತು ಸಂತೋಷ ವ್ಯಕ್ತಪಡಿಸಿರುವ ಅವರು, ಅಂಡಮಾನ್ ದ್ವೀಪಗಳ ಪೂರ್ವ ಕರಾವಳಿಯ ಕರಾವಳಿಯಿಂದ, ೯.೨೦ ನಾಟಿಕಲ್ ಮೈಲಿ ಅಂದರೆ,೧೭ ಕಿಮೀ ದೂರದಲ್ಲಿರುವ ಶ್ರೀ ವಿಜಯಪುರಂನ ೨ ಬಾವಿಯಲ್ಲಿ, ನೈಸರ್ಗಿಕ ಅನಿಲ ದೊರೆತಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ಅನಿಲ ಮಾದರಿಗಳನ್ನು ಹಡಗಿನ ಮೂಲಕ ಕಾಕಿನಾಡಕ್ಕೆ ತಂದು, ಪರೀಕ್ಷಿಸಲಾಗಿದ್ದು, ಶೇಕಡ ೮೭ರಷ್ಟು ಮೀಥೇನ್ ಕಂಡುಬಂದಿದೆ ಎಂದು ಅವರು ಹೇಳಿದ್ದಾರೆ. ಸಚಿವರ ಪ್ರಕಾರ, ಅನಿಲ ಸಂಗ್ರಹಣಾ ಸ್ಥಳದ ಗಾತ್ರ ಮತ್ತು ಆವಿಷ್ಕಾರದ ವಾಣಿಜ್ಯ ಕಾರ್ಯಸಾಧ್ಯತೆಯನ್ನು, ಮುಂಬರುವ ತಿಂಗಳುಗಳಲ್ಲಿ ಪರಿಶೀಲಿಸಲಾಗುವುದು. ಅಂಡಮಾನ್ ಜಲಾನಯನ ಪ್ರದೇಶವು, ನೈಸರ್ಗಿಕ ಅನಿಲದಿಂದ ಸಮೃದ್ಧವಾಗಿದೆ ಎಂಬ ದೀರ್ಘಕಾಲದ ನಂಬಿಕೆಯನ್ನು ದೃಢೀಕರಿಸುವಲ್ಲಿ ಇದು ಒಂದು ಪ್ರಮುಖ ಹೆಜ್ಜೆಯಾಗಿದೆ.

************

ಆಕಾಶವಾಣಿಯ ಜನಪ್ರಿಯ ಮಾಸಿಕ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ನಾಳೆ ಬೆಳಗ್ಗೆ ೧೧ ಗಂಟೆಗೆ ಪ್ರಧಾನಿ ನರೇಂದ್ರ ಮೋದಿ, ದೇಶ-ವಿದೇಶಗಳಲ್ಲಿರುವ ಭಾರತೀಯ ಸಮುದಾಯದೊಂದಿಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಇದು 'ಮನ್ ಕಿ ಬಾತ್' ಕಾರ್ಯಕ್ರಮದ ೧೨೬ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮ ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎಐಆರ್ ನ್ಯೂಸ್ ಜಾಲತಾಣ, ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಪ್ರಸಾರವಾಗಲಿದೆ. ಹಿಂದಿ ಅವತರಣಿಕೆಯ ನಂತರ ಪ್ರಾದೇಶಿಕ ಭಾಷೆಗಳಲ್ಲಿ ಈ ಕಾರ್ಯಕ್ರಮವನ್ನು ಕೇಳಬಹುದಾಗಿದೆ.

************

ದೆಹಲಿಯಲ್ಲಿ ನಿನ್ನೆ ನಡೆದ ಕಾರ್ಯಕಾರಿ ಸ್ಟೀರಿಂಗ್ ಸಮಿತಿಯ ಎರಡನೇ ಸಭೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ. ನಡ್ಡಾ ರಾಷ್ಟ್ರೀಯ ಒಂದು ಆರೋಗ್ಯ ಯೋಜನೆಯ ಪ್ರಗತಿ ಪರಿಶೀಲಿಸಿದರು.ಮಾನವ, ಪ್ರಾಣಿ, ಸಸ್ಯ ಮತ್ತು ಪರಿಸರ ಆರೋಗ್ಯದ ಪರಸ್ಪರ ಸಂಬಂಧವನ್ನು ಗುರುತಿಸುವಲ್ಲಿ, ಯೋಜನೆಯ ಪಾತ್ರವನ್ನು ಒತ್ತಿ ಹೇಳಿದ ಸಚಿವರು, ಒಟ್ಟಾಗಿ ಕೆಲಸ ಮಾಡುವುದರಿಂದ ಮಾತ್ರ, ಭವಿಷ್ಯದ ಬೆದರಿಕೆಗಳನ್ನು ತಡೆಯಬಹುದು ಎಂದು ಹೇಳಿದರು. ರಾಷ್ಟ್ರೀಯ ಆರೋಗ್ಯ ಯೋಜನೆಯ ಮೂಲಕ, ವಿವಿಧ ಇಲಾಖೆಗಳ ಸಂಘಟಿತ ಪ್ರಯತ್ನಗಳು, ಗುರಿಯನ್ನು, ಫಲಿತಾಂಶಗಳಾಗಿ ಪರಿವರ್ತಿಸುತ್ತಿವೆ ಎಂದು ಅವರು ಒತ್ತಿ ಹೇಳಿದರು.ಈ ಸಹಯೋಗವನ್ನು ಮತ್ತಷ್ಟು ಬಲಪಡಿಸಲು ಮತ್ತು ಯೋಜನೆಯ ಉಪಕ್ರಮಗಳ ಅನುಷ್ಠಾನದಲ್ಲಿ, ರಾಜ್ಯ ಕಾರ್ಯಕರ್ತರನ್ನು ಬೆಂಬಲಿಸುವಂತೆ ಕರೆ ನೀಡಿದರು. ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನಗಳು, ಮಾರ್ಗಸೂಚಿಗಳು ಮತ್ತು ಯೋಜನೆಯಲ್ಲಿ ಆಗಿರುವ ಪ್ರಗತಿಯನ್ನು ಸಚಿವರು ಶ್ಲಾಘಿಸಿದರು.

************

ಅಂಚೆ ಇಲಾಖೆ, ಒಳನಾಡಿನ ವೇಗ ಅಂಚೆ ಸುಂಕವನ್ನು ಪರಿಷ್ಕರಿಸಿದ್ದು, ವಿಶ್ವಾಸಾರ್ಹತೆ, ಭದ್ರತೆ ಮತ್ತು ಗ್ರಾಹಕರ ಅನುಕೂಲತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ಹೊಸ ವೈಶಿಷ್ಟ್ಯಗಳನ್ನು ಪರಿಚಯಿಸಿದೆ. ಮುಂದಿನ ತಿಂಗಳು ೧ ರಿಂದ, ಪರಿಷ್ಕೃತ ದರ ಜಾರಿಗೆ ಬರಲಿದೆ ಎಂದು ಸಂವಹನ ಸಚಿವಾಲಯ ತಿಳಿಸಿದೆ. ಸ್ಥಳೀಯ ಪ್ರದೇಶಗಳಲ್ಲಿ ಸ್ಪೀಡ್ ಪೋಸ್ಟ್‌ಗಾಗಿ, ೫೦ ಗ್ರಾಂ ತೂಕದ ವಸ್ತುಗಳಿಗೆ ಹೊಸ ಸುಂಕ, ೧೯ ರೂಪಾಯಿಗಳಾಗಿದ್ದು, ೫೦ ಗ್ರಾಂ ನಿಂದ ೨೫೦ ಗ್ರಾಂ ಮೀರಿದ ವಸ್ತುಗಳಿಗೆ, ೨೪ ರೂಪಾಯಿ ಹಾಗೂ ೨೫೦ ರಿಂದ ೫೦೦ ಗ್ರಾಂಗಿಂತ ಹೆಚ್ಚಿನ ತೂಕದ ವಸ್ತುಗಳಿಗೆ, ದರ ೨೮ ರೂಪಾಯಿಗಳಾಗಿರುತ್ತದೆ. ಇದಲ್ಲದೆ, ೨೦೦ ರಿಂದ ೨ ಸಾವಿರ ಕಿಲೋಮೀಟರ್‌ಗಳಿಗಿಂತ ಹೆಚ್ಚಿನ ದೂರಕ್ಕೆ, ೫೦ ಗ್ರಾಂ ವರೆಗಿನ ವಸ್ತುಗಳಿಗೆ ೪೭ ರೂಪಾಯಿಗಳ ಸುಂಕ ವಿಧಿಸಲಾಗುತ್ತದೆ. ೨೦೦ ಕಿಲೋಮೀಟರ್‌ಗಳಿಗೆ ೫೦ ಗ್ರಾಂ ನಿಂದ, ೨೫೦ ಗ್ರಾಂಗಿಂತ ಹೆಚ್ಚಿನ ತೂಕದ ವಸ್ತುಗಳಿಗೆ ಕನಿಷ್ಠ ಶುಲ್ಕ ೫೯ ರೂಪಾಯಿಗಳು ಮತ್ತು ೨ ಸಾವಿರ ಕಿಲೋಮೀಟರ್‌ಗಳಿಗಿಂತ ಹೆಚ್ಚಿನದಕ್ಕೆ, ೭೭ ರೂಪಾಯಿಗಳಾಗಿರುತ್ತದೆ. ಸ್ಪೀಡ್ ಪೋಸ್ಟ್‌ನ ಸುಂಕವನ್ನು, ದೂರವನ್ನು ಅವಲಂಬಿಸಿ, ೭೦ ರಿಂದ ೯೩ ರೂಪಾಯಿಗಳ ವ್ಯಾಪ್ತಿಯಲ್ಲಿ ಪರಿಷ್ಕರಿಸಲಾಗಿದೆ. ಸ್ಪೀಡ್ ಪೋಸ್ಟ್ ವಸ್ತುಗಳ ಮೇಲೂ ಜಿಎಸ್‌ಟಿ ಅನ್ವಯವಾಗುತ್ತದೆ ಎಂದು ಸಚಿವಾಲಯ ತಿಳಿಸಿದೆ. ವಿದ್ಯಾರ್ಥಿಗಳಿಗೆ, ಸ್ಪೀಡ್ ಪೋಸ್ಟ್ ಸುಂಕದ ಮೇಲೆ ಶೇಕಡ ೧೦ ರಷ್ಟು

ರಿಯಾಯಿತಿ ಘೋಷಿಸಲಾಗಿದೆ. ಇದಲ್ಲದೆ, ಹೊಸ ಬೃಹತ್ ಗ್ರಾಹಕರಿಗೆ ಶೇಕಡಾ ೫ ರಷ್ಟು ವಿಶೇಷ ರಿಯಾಯಿತಿಯನ್ನು ನೀಡಲಾಗುವುದು ಎಂದು ಸಚಿವಾಲಯ ತಿಳಿಸಿದೆ.

************

ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ದುಬೈನಲ್ಲಿ ನಿನ್ನೆ ನಡೆದ ಸೂಪರ್ ಫೋರ್ ಹಂತದ ಕೊನೆಯ ಪಂದ್ಯದಲ್ಲಿ, ಭಾರತ ತಂಡ, ಸೂಪರ್ ಓವರ್ ನಲ್ಲಿ ಶ್ರೀಲಂಕಾವನ್ನು ಸೋಲಿಸಿ, ಅಜೇಯವಾಗಿ ಫೈನಲ್ ತಲುಪಿದೆ. ಭಾರತ ಈಗಾಗಲೇ ಏಷ್ಯಾ ಕಪ್ ಫೈನಲ್‌ಗೆ ಅರ್ಹತೆ ಪಡೆದಿದ್ದರೆ, ಶ್ರೀಲಂಕಾ ಸೂಪರ್ ೪ ಹಂತದ ಎಲ್ಲಾ ಎರಡೂ ಪಂದ್ಯಗಳನ್ನು ಸೋತು ಹೊರಬಿದ್ದರೂ, ನಿನ್ನೆ ರಾತ್ರಿ ನಡೆದ ಸೂಪರ್ ಫೋರ್ ಪಂದ್ಯ, ಈ ಸಾಲಿನ ಅತ್ಯಂತ ರೋಮಾಂಚಕಾರಿ ಪಂದ್ಯವಾಗಿ ಹೊರಹೊಮ್ಮಿತು, ಪಂದ್ಯವು ಟೈ ಆದ ನಂತರ, ಸೂಪರ್ ಓವರ್‌ಗೆ ಪ್ರವೇಶಿಸಿತು. ಸೂಪರ್ ಓವರ್‌ನಲ್ಲಿ, ಭಾರತದ ಪರ ಎಡಗೈ ವೇಗಿ ಅರ್ಶ್‌ದೀಪ್ ಸಿಂಗ್, ಎರಡು ವಿಕೆಟ್‌ಗಳನ್ನು ಕಬಳಿಸಿ, ಶ್ರೀಲಂಕಾವನ್ನು ೨ ರನ್‌ಗಳಿಗೆ ಸೀಮಿತಗೊಳಿಸಿದರು. ಪಂದ್ಯವನ್ನು ಗೆಲ್ಲಲು ೩ ರನ್‌ಗಳ ಅಗತ್ಯವಿದ್ದ ಭಾರತ, ಮೊದಲ ಎಸೆತದಲ್ಲೇ ಗೆಲುವು ಸಾಧಿಸಿತು. ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಭಾರತ, ನಿಗದಿತ ೨೦ ಓವರ್‌ಗಳಲ್ಲಿ, ಐದು ವಿಕೆಟ್‌ಗಳ ನಷ್ಟಕ್ಕೆ, ಒಟ್ಟು ೨೦೨ ರನ್‌ಗಳನ್ನು ಗಳಿಸಿತು. ಅಭಿಷೇಕ್ ಶರ್ಮಾ ೬೧ ರನ್‌ಗಳೊಂದಿಗೆ ಭಾರತದ ಪರ ಅತ್ಯಧಿಕ ರನ್ ಗಳಿಸಿದರು. ಗುರಿ ಬೆನ್ನತ್ತಿದ ಶ್ರೀಲಂಕಾ ತಂಡದ ಪರ, ಪಾಥುಮ್ ನಿಸ್ಸಂಕಾ ಅದ್ಭುತ ಶತಕ ಗಳಿಸುವ ಮೂಲಕ, ೨೦ ಓವರ್‌ಗಳಲ್ಲಿ ಭಾರತದ ೨೦೨ ರನ್‌ಗಳ ಮೊತ್ತವನ್ನು ಸಮಬಲಗೊಳಿಸುವಂತೆ ಮಾಡಿದರು. ಪಾಥುಮ್ ನಿಸ್ಸಂಕಾ ಅವರನ್ನು ಪಂದ್ಯಶ್ರೇಷ್ಠ ಎಂದು ಘೋಷಿಸಲಾಯಿತು.ದುಬೈನಲ್ಲಿ ನಾಳೆ ನಡೆಯಲಿರುವ ಟೂರ್ನಿಯ ಅಂತಿಮ ಹಣಾಹಣಿಯಲ್ಲಿ, ಭಾರತ, ಪಾಕಿಸ್ತಾನವನ್ನು ಎದುರಿಸಲಿದೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮ ಗಂಟೆಗೆ ಪ್ರಾರಂಭವಾಗಲಿದೆ.

************

ನವದೆಹಲಿಯ ಜವಾಹರ್ ಲಾಲ್ ನೆಹರು ಕ್ರೀಡಾಂಗಣದಲ್ಲಿ ಇಂದು ೧೨ನೇ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್ -೨೦೨೫ಕ್ಕೆ ವಿಧ್ಯುಕ್ತ ಚಾಲನೆ ದೊರೆಯಲಿದೆ. ೯ ದಿನಗಳು ನಡೆಯಲಿರುವ ಕ್ರೀಡಾಕೂಟದಲ್ಲಿ ೧೮೬ ಪದಕ ಸ್ಪರ್ಧೆಗಳು ನಡೆಯಲಿವೆ.೧೦೧ ಪುರುಷರು, ೮೪ ಮಹಿಳೆಯರು ಮತ್ತು ೧ ಮಿಶ್ರ ಸ್ಪರ್ಧೆಯನ್ನು ಒಳಗೊಂಡಿದೆ. ಅಕ್ಟೋಬರ್ ೫ರಂದು ಕೂಟಕ್ಕೆ ತೆರೆ ಬೀಳಲಿದೆ.